KADG620005522023

Presented on : 04-03-2023
Registered on : 09-03-2023
Decided on : 01-07-2026
Duration : 3 years, 3 months, 28 days

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯದಲ್ಲಿ ಜಗಳೂರು**

**ಉಪಸ್ಥಿತರುಃ ಶ್ರೀ. ಚೇತನ್ ಆರ್.**

ಬಿ.ಎ. ಎಲ್., ಎಲ್.ಎಲ್.ಬಿ.

**ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ಜ ಗ ಳೂ ರು.**

**ದಿನಾಂಕಃ 01 ನೇ ಜುಲೈ 2026 ನೇ ಇಸವಿ**

**ಸಿ.ಸಿ. ಸಂಖ್ಯೆ 327/2023**

**ಫಿರ್ಯಾದಿದಾರರು** : ಸರ್ಕಾರದ ಪರವಾಗಿ ಬಿಳಚೋಡು ಪೋಲೀಸ್ ಠಾಣೆ.
(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)

**ವಿರುದ್ದ**

**ಆರೋಪಿತರು** :

1. ಅವಿನಾಶ @ ಅವಿನಾಶ ಎಸ್ ತಂದೆ ಶಿವಮೂರ್ತಪ್ಪ,
   28 ವರ್ಷ, ಜಿರಾಯ್ತಿ,

2. ಸಂದೀಪ್ ಯಾನೆ ಸಂದೀಪ ಕುಮಾರ
   ತಂದೆ ಶಿವಮೂರ್ತಪ್ಪ, 30 ವರ್ಷ,
   ಇಬ್ಬರ ವಾಸ: ಗುತ್ತಿದುರ್ಗ ಗ್ರಾಮ,
   ಜಗಳೂರು ತಾ. ದಾವಣಗೆರೆ ಜಿಲ್ಲೆ.

**(ಆರೋಪಿತರ ಪರವಾಗಿ ಶ್ರೀ. ಟಿ ಹೆಚ್ ವಿ ವಕೀಲರು ಪ್ರತಿನಿಧಿಸಿರುತ್ತಾರೆ.)**

| | | |
|---|---|---|
| ಅಪರಾಧವಾದ ದಿನಾಂಕ | : | 27.11.2022 |
| ಪ್ರಕರಣ ವರದಿಯಾದ ದಿನಾಂಕ | : | 27.11.2022 |
| ಆರೋಪಿ ತನಿಖಾಧಿಕಾರಿಗಳಿಂದ ಜಾಮೀನಿನ ಮೇಲೆ | : | |
| ಬಿಡುಗಡೆಯಾದ ದಿನಾಂಕ | : | |
| ಸಾಕ್ಷಿ ವಿಚಾರಣೆ ದಿನಾಂಕ | : | 24.12.2024 |
| ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | : | 08.06.2026 |
| ಅಪರಾಧ ಕಲಂ | : | ಭಾ.ದಂ.ಸಂ.ಕಲಂ.324, 323, 504, 506, ಜೊತೆ 34 |
| ನ್ಯಾಯಾಧೀಶರ ಅಭಿಪ್ರಾಯ | : | ಆರೋಪಿತರನ್ನು ಬಿಡುಗಡೆ ಮಾಡಲಾಗಿದೆ |

## ತೀರ್ಪು

ಆರೋಪಿತರು ಭಾ.ದಂ.ಸಂ.ಕಲಂ. 324, 323, 504, 506, ಜೊತೆ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆಂದು ಆಪಾದಿಸಿ ಬಿಳಿಚೋಡು ಪೋಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಃ**

ಆರೋಪಿತರು ಚಾಸಾ.1 ರವರಿಗೆ ಸಂಬಂಧಿಕರಾಗಿದ್ದು ಚಾಸಾ.1 ರವರ ಜಮೀನುಗಳು ಮತ್ತು ಆರೋಪಿತರ ಜಮೀನುಗಳು ಜಂಟಿ ಖಾತೆಗಳಿದ್ದು ಅವರವರ ಜಮೀನುಗಳನ್ನು ಉಳುಮೆ ಮಾಡಿಕೊಂಡು ಹೋಗುತ್ತಿದ್ದು ದಿನಾಂಕ: 27.11.2022 ರಂದು 1 ನೇ ಆರೋಪಿ ತಮ್ಮ ಜಮೀನುಗಳನ್ನು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು ಚಾಸಾ.1 ರವರಿಗೆ ತಮ್ಮ ಮನೆಗೆ ಕರೆದು ಕೇಳಿದಾಗ ಎರಡುಕಡೆಯವರು ಮಾತಿಗೆ ಮಾತು ಬೆಳೆದು ವಾದ ವಿವಾದ ಮಾಡಿಕೊಂಡಿದ್ದು, ದಿನಾಂಕ: 27.11.2022 ರಂದು 3 ಗಂಟೆಯ ಸಮಯದಲ್ಲಿ ಗುತ್ತಿದುರ್ಗ ಗ್ರಾಮದ ವಾಸಿ ಚಾಸಾ.4 ರವರ ಮನೆಯ ಮುಂಭಾಗ ಚಾಸಾ.1 ರವರು 1 ನೇ ಆರೋಪಿಯ ಮನೆಗೆ ಹೋಗಿ ಜಮೀನಿನ ವಿಚಾರವಾಗಿ ಮಾತನಾಡಿಕೊಂಡು ವಾಪಸ್ ತಮ್ಮ ಮನೆಗೆ ಹೋಗಲು

ನಡೆದುಕೊಂಡು ಹೋಗುತ್ತಿರುವಾಗ ಹಿಂದಿನಿಂದ ಬಂದ 1 ನೇ ಮತ್ತು 2 ನೇ ಆರೋಪಿತರು ಚಾಸಾ.1 ರವರನ್ನು ಕುರಿತು ಸೂಳೀ ಮಗನೇ ಮಿಂಡ್ರಿಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು ನೀನು ನಿಮ್ಮ ತಾಯಿ ಮೂವರು ಸಹಿ ಹಾಕಿ ಜಮೀನನ್ನು ನಮ್ಮ ಹೆಸರಿಗೆ ಮಾಡಿಸದಿದ್ದರೆ ನಿಮ್ಮನ್ನು ಜೀವಂತವಾಗಿ ಬಿಡುವುದಿಲ್ಲ ಎಂದು ಪ್ರಾಣಬೆದರಿಕೆ ಹಾಕುತ್ತಾ 1 ನೇ ಆರೋಪಿ ಕೈಮುಷ್ಟಿಯಿಂದ ಚಾಸಾ.1 ರವರ ತಲೆಗೆ ಹೊಡೆದು, ಅಲ್ಲೇ ಬಿದ್ದಿದ್ದ ಒಂದು ಕಲ್ಲನ್ನು ತೆಗೆದುಕೊಂಡು ಚಾಸಾ.1 ರವರ ಎದೆಗೆ ಹೊಡೆದು ಆಗ ಚಾಸಾ.1 ರವರು ಕೆಳಗೆ ಬಿದ್ದಾಗ 1 ನೇ ಮತ್ತು 2 ನೇ ಆರೋಪಿತರು ಸೇರಿ ಕೈಕಾಲುಗಳಿಂದ ಹೊಡೆಬಡೆ ಮಾಡಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆಂದು ಆರೋಪಿತರ ವಿರುದ್ಧ ಆಪಾದನೆ ಮಾಡಲಾಗಿರುತ್ತದೆ.

3. ದಿನಾಂಕ 27.11.2022 ರಂದು ಚಾಸಾ.10 ರವರು ಠಾಣಾ ಪ್ರಭಾರದಲ್ಲಿದ್ದಾಗ, ಚಾಸಾ1 ರವರು ಠಾಣೆಗೆ ಹಾಜರಾಗಿ ಜಗಳೂರು ಪೊಲೀಸ್ ಠಾಣೆಯಲ್ಲಿ ನೀಡಿದ ದೂರನ್ನು ಚಾಸಾ.10 ಆರಕ್ಷಕ ಉಪ ನಿರೀಕ್ಷಕರು ಸ್ವೀಕರಿಸಿ, ತಮ್ಮ ಠಾಣಾ ಗುನ್ನೆ ಸಂಖ್ಯೆ:143/2022 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು, ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿ, ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ, ಪಂಚರ ಸಮಕ್ಷಮ ಪಂಚನಾಮೆ ಮಾಡಿ, ನಂತರ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದು, ಸಾಕ್ಷಿದಾರರ ವಿಚಾರಣೆ ಮಾಡಿ, ತನಿಖೆ ಪೂರೈಸಿ ಆರೋಪಿತರ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

4. ದೋಷಾರೋಪಣಾ ಪತ್ರ ಸಲ್ಲಿಸಿದ ನಂತರ ಅಪರಾಧಗಳ ಬಗ್ಗೆ ಸಂಜ್ಞೆಯನ್ನು ತೆಗೆದುಕೊಂಡು, ಆರೋಪಿತರನ್ನು ಸಮನ್ಸ್ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಿಕೊಳ್ಳಲಾಯಿತು. ಆರೋಪಿತರು ಸೂಕ್ತ ಜಾಮೀನು ನೀಡಿದ್ದರಿಂದ ಆರೋಪಿತರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ಆರೋಪಿತರಿಗೆ ದಂ.ಪ್ರಂ.ಸಂ. ಕಲಂ 207 ರ ಪ್ರಕಾರ ಆರೋಪಿತರಿಗೆ ದೋಷಾರೋಪಣಾ ಪಟ್ಟಿಯ ನಕಲನ್ನು

ಒದಗಿಸಲಾಯಿತು. ನಂತರ ದೋಷಾರೋಪಣೆ ರಚಿಸುವ ಮುನ್ನ ಆರೋಪಿತರ ಪರ ವಾದ ವಿವಾದಗಳನ್ನು ಆಲಿಸಿ ನದನಂತರ ದೋಷಾರೋಪಣೆಯನ್ನು ರಚಿಸಿ ಆರೋಪಿತರಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಯಿತು ಆರೋಪಿತರು ಸದರಿ ಆರೋಪಗಳನ್ನು ಅಲ್ಲಗಳೆದಿದ್ದು ವಿಚಾರಣೆಯಾಗಬೇಕೆಂದು ಕೇಳಿಕೊಂಡಿರುತ್ತಾರೆ.

5. ಅಭಿಯೋಜನೆಯು ಆರೋಪಿತರ ಮೇಲಿನ ಆರೋಪಗಳನ್ನು ಸಾಬೀತುಪಡಿಸಲು ತನ್ನ ಪರವಾಗಿ ಚಾಸಾ.1 ನ್ನು ಪ್ರಾಸಾ.1, ಚಾಸಾ.2 ನ್ನು ಪ್ರಾಸಾ.2, ಎಂದು ವಿಚಾರಣೆ ಮಾಡಿಸಿದ್ದು, ಒಟ್ಟು 05 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಸ.ಸ.ಅ ರವರು ಇನ್ನುಳಿದ ಸಾಕ್ಷಿ ದಾರರಿಗೆ ಸಮನ್ಸ್ ಜಾರಿ ಮಾಡಲು ಕೋರಿದ್ದು, ಆದರೆ ಚಾಸಾ.1 ಮತ್ತು 2 ದೂರದಾರ ಮತ್ತು ನೂಂದವ್ಯಕ್ತಿಗಳಾಗಿದ್ದು, ಸದರಿಯವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದರಿಂದ ಮತ್ತು ಪ್ರಕರಣ ರಾಜಿ ಆಗಿದೆ ಎಂದು ಹೇಳಿರುವುದರಿಂದ ಸ.ಸ.ಅ. ರವರ ಮನವಿಯನ್ನು ತಿರಸ್ಕರಿಸಿ, ಅಭಿಯೋಜನೆಯ ಪರ ಸಾಕ್ಷ್ಯವನ್ನು ಮುಕ್ತಾಯಗೊಳಿಸಲಾಯಿತು.

6. ಅಭಿಯೋಜನಾ ಪರ ವಿಚಾರಣೆ ಮಾಡಿಸಿದ ಚಾಸಾ.1 ಮತ್ತು 2 ರವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದು ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯ ದಾಖಲಾಗದೇ ಇದ್ದುದರಿಂದ. ಪ್ರಂ.ಸಂ. ಕಲಂ 313 ರಲ್ಲಿನ ಆರೋಪಿಯ ಹೇಳಿಕೆಯನ್ನು ಕೈಬಿಡಲಾಯಿತು.

7. ಅಭಿಯೋಜನೆಯ ಪರ ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು ಆರೋಪಿತರ ಪರ ವಕೀಲರ ವಾದ ವಿವಾದಗಳನ್ನು ಆಲಿಸಲಾಯಿತು ನಂತರ ನನ್ನ ಪರಿಗಣನೆಗಾಗಿ ಈ ಕೆಳಕಂಡ ಅಂಶಗಳನ್ನು ರಚಿಸಲಾಯಿತು.

<u>: ಅಂಶಗಳು :</u>

**1.** ದಿನಾಂಕ: 27.11.2022 ರಂದು 3 ಗಂಟೆಯ ಸಮಯದಲ್ಲಿ ಗುತ್ತಿದುರ್ಗ

ಗ್ರಾಮದ ವಾಸಿ ಚಾಸಾ.4 ರವರ ಮನೆಯ ಮುಂಭಾಗ ಚಾಸಾ.1 ರವರು 1 ನೇ ಆರೋಪಿಯ ಮನೆಗೆ ಹೋಗಿ ಜಮೀನಿನ ವಿಚಾರವಾಗಿ ಮಾತನಾಡಿಕೊಂಡು ವಾಪಸ್ ತಮ್ಮ ಮನೆಗೆ ಹೋಗಲು ನಡೆದುಕೊಂಡು ಹೋಗುತ್ತಿರುವಾಗ ಹಿಂದಿನಿಂದ ಬಂದ 1 ನೇ ಮತ್ತು 2 ನೇ ಆರೋಪಿತರು ಚಾಸಾ.1 ರವರನ್ನು ಕುರಿತು ಸೂಳೇ ಮಗನೇ ಮಿಂಡ್ರಿಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು ನೀನು ನಿಮ್ಮ ತಾಯಿ ಮೂವರು ಸಹಿ ಹಾಕಿ ಜಮೀನನ್ನು ನಮ್ಮ ಹೆಸರಿಗೆ ಮಾಡಿಸದಿದ್ದರೆ ನಿಮ್ಮನ್ನು ಜೀವಂತವಾಗಿ ಬಿಡುವುದಿಲ್ಲ ಎಂದು ಪ್ರಾಣಬೆದರಿಕೆ ಹಾಕುತ್ತಾ 1 ನೇ ಆರೋಪಿ ಕೈಮುಷ್ಠಿಯಿಂದ ಚಾಸಾ.1 ರವರ ತಲೆಗೆ ಹೊಡೆದು, ಅಲ್ಲೇ ಬಿದ್ದಿದ್ದ ಒಂದು ಕಲ್ಲನ್ನು ತೆಗೆದುಕೊಂಡು ಚಾಸಾ.1 ರವರ ಎದೆಗೆ ಹೊಡೆದು ಆಗ ಚಾಸಾ.1 ರವರು ಕೆಳಗೆ ಬಿದ್ದಾಗ 1 ನೇ ಮತ್ತು 2 ನೇ ಆರೋಪಿತರು ಸೇರಿ ಕೈಕಾಲುಗಳಿಂದ ಹೊಡೆಬಡೆ ಮಾಡಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆಂದು ಆರೋಪಿ 1 ಮತ್ತು 2 ರವರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ. 324, 323, 504, 506 ಜೊತೆ 34 ರಡಿಯಲ್ಲಿ ದಂಡನೀಯ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜವಾತು ಪಡಿಸುತ್ತಾರೆಯೇ ?

2. ಮಾಡುವ ಆದೇಶ ಏನು ?

**8. ಈ ಕೆಳಗೆ ಚರ್ಚಿಸಿದ ಕಾರಣಗಳಿಂದಾಗಿ ಮೇಲ್ಕಂಡ ಅಂಶಗಳಿಗೆ ಈ ರೀತಿ ಉತ್ತರಿಸಿರುತ್ತೇನೆ.**

ಅಂಶ ನಂಃ 1 : ನಕರಾತ್ಮಕವಾಗಿ

ಅಂಶ ನಂಃ 2 : ಅಂತಿಮ ಆದೇಶದಂತೆ

ಈ ಕೆಳಗಿನ ಕಾರಣಗಳಿಗಾಗಿಃ

## ಕಾ ರ ಣ ಗ ಳು

**9. ಅಂಶ 1:** ಅಭಿಯೋಜನೆಯು ಆರೋಪಿಗಳ ಮೇಲೆ ಇರುವ ದೋಷಾರೋಪಣೆಯನ್ನು ಸಾಬೀತುಪಡಿಸಲು, ಮೊದಲಿಗೆ ಚಾಸಾ.1 ನ್ನು ಪ್ರಾಸಾ.1, ಚಾಸಾ.2 ನ್ನು ಪ್ರಾಸಾ.2, ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ಈ ಪ್ರಕರಣದಲ್ಲಿ ಆರೋಪಿಗಳು ತಮಗೆ ಗೊತ್ತು. ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೊಪಿತರ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ. ಸಾಕ್ಷಿಯು ದೂರಿನಲ್ಲಿದ್ದ ತನ್ನ ಸಹಿಯನ್ನು ಗುರುತಿಸಿರುತ್ತಾರೆ ಆದರೆ

ಅದರಲ್ಲಿರುವ ವಿಚಾರ ತನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಹಾಗೂ ನ್ಯಾಯಾಲಯದ ಮುಂದೆ ಇದ್ದ ಎರಡು ಮುದ್ದೆ ಮಾಲುಗಳು ತನಗೆ ಗೊತ್ತಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆರೋಪಿಗಳು ತನಗೆ ಹಾಗೂ ಚಾಸಾ.2 ರವರಿಗೆ ಯಾವುದೇ ರೀತಿಯ ಹಲ್ಲೆ ಮಾಡಿರುವುದಿಲ್ಲ ಹಾಗೂ ಪ್ರಾಣ ಬೆದರಿಕೆ ಹಾಕಿರುವುದಿಲ್ಲ ಎಂದು ಹೇಳಿರುತ್ತಾರೆ ಹಾಗೂ ಪಂಚನಾಮೆಯಲ್ಲಿದ್ದ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ ಆದರೆ ಅದರಲ್ಲಿ ಇರುವ ವಿಚಾರ ತಿಳಿದಿರುವುದಿಲ್ಲ ಎಂದು ಹೇಳುತ್ತಾರೆ. ತಮ್ಮ  ಭಾವಚಿತ್ರ ಇದ್ದ ಒಂದು ಫೋಟೊವನ್ನು ಗುರುತಿಸಿರುತ್ತಾರೆ ಆದರೆ ಅದನ್ನು ಯಾವ ಉದ್ದೇಶಕ್ಕೆ ತೆಗೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ.  ನಂತರ ಸ ಸ ಅ ರವರು ನ್ಯಾಯಾಲಯದ ಅನುಮತಿ ಪಡೆದು ಪ್ರತಿಕೂಲವಾದ ಸಾಕ್ಷಿ ಪ್ರಾಸಾ.1 ಮತ್ತು 2 ರವರನ್ನು ಪಾಟೀಸವಾಲು ಮಾಡಿದ್ದು  ಮಾನ್ಯ ಸ ಸ ಅ ರವರು ಅಭಿಯೋಜನೆಯ ತನ್ನ ಪ್ರಕರಣವನ್ನು ಸೂಚನೆ ಮೂಲಕ ಹೇಳಿದ್ದು ಸದರಿ ಸೂಚನೆಗಳನ್ನು ಸಾಕ್ಷಿಯು ಅಲ್ಲಗಳೆದಿರುತ್ತಾರೆ. ತಾನು ಪೊಲೀಸರಿಗೆ ಯಾವುದೇ ಮರುಹೇಳಿಕೆಯನ್ನು ನೀಡಿರುವುದಿಲ್ಲ. ಮುಂದುವರೆದು ಪ್ರಾಸಾ.1 ಮತ್ತು ಪ್ರಾಸಾ.2 ರವರು ಆರೋಪಿತರೊಡನೆ ತಾನು ರಾಜೀಯಾಗಿರುವುದಾಗಿ ತಿಳಿಸಿರುತ್ತಾರೆ.

10. ಈ ಪ್ರಕರಣದ ಸಾರಾಂಶವನ್ನು ಈಗಾಗಲೇ ತೀರ್ಪಿನ ಆರಂಭದಲ್ಲೇ ಹೇಳಿರುವುದರಿಂದ ಇಲ್ಲಿ ಮತ್ತೊಮ್ಮೆ ಪುನರಾವರ್ತಿಸದೆ ಪ್ರಕರಣದ ದಾಖಲೆಯ ಮತ್ತು ಮೌಖಿಕ ಸಾಕ್ಷ್ಯಗಳನ್ನು ಗಮನಿಸುವುದಾದರೇ, ಸದರಿ ಪ್ರಕರಣದಲ್ಲಿ ದೂರುದಾರರು ಸೇರಿದಂತೆ ಅಭಿಯೋಜನೆಯವರು ಚಾಸಾ1 ರಿಂದ 10 ರವರನ್ನು ಸಾಕ್ಷಿ ಪಟ್ಟಿ ಮಾಡಿದ್ದು, ಸದರಿ ಸಾಕ್ಷಿಗಳಲ್ಲಿ ಚಾಸಾ.1 ನ್ನು ಪ್ರಾಸಾ.1, ಚಾಸಾ.2 ನ್ನು ಪ್ರಾಸಾ.2 ರವರನ್ನು ಸಾಕ್ಷಿಗೆ ಒಳಪಡಿಸಿದ್ದು, ತಮ್ಮ ಪರವಾಗಿ ನಿಪಿ 1 ರಿಂದ 5 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಇದರೊಂದಿಗೆ ಅಭಿಯೋಜನೆಯು ಸದರಿ ಪ್ರಕರಣದ ಆರೋಪಿತರ ಮೇಲಿನ ಆರೋಪವನ್ನು ಸಂಶಯಾತೀತವಾಗಿ ರುಜುವಾತು ಪಡಿಸುವ

ಹೊಣೆಗಾರಿಕೆಯನ್ನು ಹೊಂದಿದ್ದು, ಅದರಂತೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಆರೋಪಿಯ ಪರ ನ್ಯಾಯವಾದಿಗಳು ತಮ್ಮಗಳ ವಾದವನ್ನು ಮಂಡಿಸಿರುತ್ತಾರೆ. ಅದರಂತೆ ಮಾನ್ಯ ಸಹಾಯಕ ಅಭಿಯೋಜಕರು ತಮ್ಮ ವಾದ ಮಂಡಿಸುತ್ತಾ, ಸದರಿ ಪ್ರಕರಣದಲ್ಲಿ ಸಾಕ್ಷಿಯ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ ಆರೋಪಿತರ ಮೇಲಿನ ಆರೋಪವು ಸಾಬೀತಾಗಿದ್ದು, ಆರೋಪಿಗೆ ಗರಿಷ್ಟ ಪ್ರಮಾಣ ಶಿಕ್ಷೆ ಕೊಡಬೇಕೆಂದು ವಾದಿಸಿರುತ್ತಾರೆ.

11. ಸದರಿ ಮಾನ್ಯ ಸರ್ಕಾರಿ ಅಭಿಯೋಜಕರು ವಾದಕ್ಕೆ ಪ್ರತಿಯಾಗಿ ಆರೋಪಿತರ ಪರ ನ್ಯಾಯವಾದಿಗಳು ಮಾನ್ಯ ಸರ್ಕಾರಿ ಅಭಿಯೋಜಕರ ವಾದವನ್ನು ವಿರೋದಿಸುತ್ತಾ, ಸದರಿ ಪ್ರಕರಣದಲ್ಲಿ ಗಾಯಾಳು, ಪ್ರಮುಖ ಮತ್ತು ಪ್ರತ್ಯಕ್ಷ್ಯ ಸಾಕ್ಷಿದಾರರಾದ ಪ್ರಾಸಾ.1 ಮತ್ತು 2 ರವರು ಸಂಪೂರ್ಣ ಪ್ರತಿಕೂಲ ಸಾಕ್ಷಿ ನುಡಿದಿದ್ದು, ಸದರಿ ಪ್ರಮುಖ ಸಾಕ್ಷ್ಯದ ಗೈರುಹಾಜರಾತಿಯಲ್ಲಿ ಅಭಿಯೋಜನೆಯು ಆರೋಪಿತರ ಮೇಲಿನ ಆರೋಪವನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲರಾಗಿರುವುದರಿಂದ ಆರೋಪಿಯನ್ನು ಆರೋಪಮುಕ್ತಗೊಳಿಸಿ ಬಿಡುಗಡೆ ಮಾಡಬೇಕೆಂದು ವಾದಿಸಿರುತ್ತಾರೆ.

12. ಅಭಿಯೋಜನೆ ಪರ ಲಭ್ಯವಿದ್ದ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಿ ನೋಡಿದಾಗ, ಅ.ಸಾ./ಪ್ರಾಸಾ.1 ರವರು ದೂರುದಾರರ ಹಾಗೂ ಗಾಯಾಳು ಆಗಿದ್ದು ಅವರೇ ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದು ಹಾಗೂ ಪ್ರಾಸಾ.2 ರವರು ನೊಂದವ್ಯಕ್ತಿಯಾಗಿದ್ದು ಅವರೂ ಕೂಡ ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ. ಸದರಿಯವರನ್ನು ಸ.ಸ.ಅ. ರವರು ಸಾಕಷ್ಟು ಸಮಯದವರೆಗೆ ಪಾಟೀ ಸವಾಲು ಮಾಡಿದರೂ ಸಹ ತಮ್ಮ ಪರ ಸಾಕ್ಷ್ಯ ಪಡೆಯುವಲ್ಲಿ ವಿಫಲರಾಗಿರುತ್ತಾರೆ. ಅ.ಸಾ.1 ಫಿರ್ಯಾದುದಾರು ಮತ್ತು ನೊಂದ ವ್ಯಕ್ತಿಯಾಗಿದ್ದು, ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ, ಅಲ್ಲದೇ ತಮ್ಮ ಪಾಟೀ ಸವಾಲಿನಲ್ಲಿ ತಾವು ಮತ್ತು ಆರೋಪಿತರು ರಾಜೀ ಆದ ಬಗ್ಗೆ ಒಪ್ಪಿಕೊಂಡಿರುತ್ತಾರೆ.

ಇದರಿಂದ ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯ ಇರದೇ ಇರುವುದರಿಂದ ಘಟನೆಯಾದ ಬಗ್ಗೆ ಸಂಶಯ ಉಂಟಾಗುತ್ತಿದ್ದು, ಕಾರಣ ಸಂಶಯದ ಲಾಭವನ್ನು ಆರೋಪಿತರಿಗೆ ನೀಡುತ್ತಾ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ. 324, 323, 504, 506 ಜೊತೆ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತಾರೆಂದು ಸಂಶಯಾತೀತವಾಗಿ ಸಾಬೀತುಪಡಿಸುವಲ್ಲಿ ವಿಫಲವಾಗಿದ್ದರಿಂದ ಅಂಶ.1 ನ್ನು ನಕಾರಾತ್ಮಕವಾಗಿ ಎಂದು ಈ ನ್ಯಾಯಾಲಯವು ಉತ್ತರಿಸುತ್ತದೆ.

**13. ಅಂಶ 2:** ಈ ಮೇಲಿನ 1 ನೇ ಅಂಶಗಳಲ್ಲಿ ಚರ್ಚಿಸಿದ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

**ಆದೇಶ**

ಆರೋಪಿ 1 ಮತ್ತು 2 ರವರ ವಿರುದ್ಧ ಭಾರತೀಯ ದಂಡ ಸಂಹಿತೆ 324, 323, 504, 506, ಜೊತೆ 34 ರಡಿಯಲ್ಲಿ ಆರೋಪದ ತಪ್ಪಿತಸ್ಥರೆಂದು ಕಂಡುಬಂದಿರುವುದಿಲ್ಲ.

ದಂಡ ಪ್ರಕ್ರಿಯಾ ಸಂಹಿತೆ ಕಲಂ. 248(1) ರಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಭಾರತೀಯ ದಂಡ ಸಂಹಿತೆ ಕಲಂ. 324, 323, 504, 506 ಜೊತೆ 34 ರಡಿಯಲ್ಲಿ ಆಪಾದನೆಯಿಂದ ಆರೋಪಿತರನ್ನು ದೋಷಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿರುತ್ತದೆ.

ಆರೋಪಿತರು ಮತ್ತು ಜಾಮೀನುದಾರರು ದಂ.ಪ್ರಂ.ಸಂ ಕಲಂ 437(ಎ) ರಡಿಯಲ್ಲಿ ಜಾಮೀನು ಮುಚ್ಚಳಿಕೆಯನ್ನು ಬರೆದುಕೊಟ್ಟಿದ್ದು ಸದರಿ ಜಾಮೀನು ಮುಚ್ಚಳಿಕೆಯು ಈ ದಿನಾಂಕದಿಂದ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ. ನಂತರ

ರದ್ದುಗೊಳ್ಳುವುದು.

ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಮುದ್ದೆಮಾಲು ಪಿ ಎಫ್ ಸಂಖ್ಯೆಃ 108/2022 ಪಿ ಆರ್ ಸಂಖ್ಯೆಃ43/2022 ರ ದಿನಾಂಕಃ 30.11.2022 ಒಂದು ಕಾಡು ಕಲ್ಲು, ಮೌಲ್ಯ ರಹಿತವಾದುದ್ದರಿಂದ ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, 01 ನೇ ಜುಲೈ 2026 ನೇ ದಿನಾಂಕದಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

CHETHAN R
Digitally signed by CHETHAN R
Date: 2026.07.02 13:20:09 +0530

**(ಚೇತನ್.ಆರ್ )**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**

**ಜಗಳೂರು.**

**::ಅನುಬಂಧ ::**

**ಅಭಿಯೋಜನೆಯ ಪರವಾಗಿ ವಿಚಾರಣೆಗೊಳ್ಳಪಟ್ಟ ಸಾಕ್ಷಿದಾರರ ಪಟ್ಟಿ**

ಪಿಡಬ್ಲ್ಯೂ 1 ಕಲ್ಲೇಶಪ್ಪ

ಪಿಡಬ್ಲ್ಯೂ 2 ರಾಜಪ್ಪ

**ಆರೋಪಿತರ ಪರವಾಗಿ ವಿಚಾರಣೆಗೊಳ್ಳಪಟ್ಟ ಸಾಕ್ಷಿದಾರರ ಪಟ್ಟಿ**

ಇಲ್ಲ

**ಅಭಿಯೋಜನೆಯ ಪರವಾಗಿ ಗುರುತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ**

| | | |
|---|---|---|
| ನಿಪಿ 1 | : | ಸ್ಥಳಪಂಚನಾಮೆ ದೂರು |
| ನಿಪಿ 1(ಎ) | ಃ | ಸಹಿ |
| ನಿಪಿ 2 | : | ಫೋಟೋ |
| ನಿಪಿ 3 | ಃ | ಕಚ್ಚಾನಕಾಶೆ |
| ನಿಪಿ 3(ಎ) | ಃ | ಸಹಿ |
| ನಿಪಿ. 4 | ಃ | ದೂರು |
| ನಿಪಿ 4(ಎ) | ಃ | ಸಹಿ |

ನಿಪಿ 5 ಃ ಸಾಕ್ಷಿ ನಿರಾಕರಿಸಿದ ಹೇಳಿಕೆ

**ಆರೋಪಿತರ ಪರವಾಗಿ ಗುರುತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ**

ಇಲ್ಲ

**ಅಭಿಯೋಜನೆಯ ಪರವಾಗಿ ಗುರುತಿಸಲ್ಪಟ್ಟಿರುವ ಮುದ್ದೆಮಾಲುಗಳುಃ**

ಮು.ಮಾಲು. 1: ಒಂದು ಹಿಡಿಗಾತ್ರದ ಕಲ್ಲು

CHETHAN R
Digitally signed by CHETHAN R
Date: 2026.07.02 13:20:22 +0530

**(ಚೇತನ್.ಆರ್ )**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,

ಜಗಳೂರು.